**ಸಾಕ್ಷಿಯನ್ನು ದಿನಾಂಕ: 10.03.2025 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ BKS ರವರಿಂದಃ**

ವಾದಿ ನನ್ನ ತಂದೆ. ವಾದಿಯು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ಹೇಳುವ ಸ್ಥಿತಿಯಲ್ಲಿರುತ್ತಾರೆ ಆದರೆ ವಯಸ್ಸಾಗಿರುತ್ತದೆ. ಈ ದಾವೆಯನ್ನು ಹೂಡಲು ವಕೀಲರಿಗೆ ಮಾತಿಯನ್ನು ವಾದಿಯೇ ನೀಡಿರುತ್ತಾರೆ. ನಮ್ಮ ಮನೆತನದ ಬಗ್ಗೆ ನನಗಿಂತ ನನ್ನ ತಂದೆಯಾದ ವಾದಿಗೆ ಹೆಚ್ಚು ಗೊತ್ತಿರುತ್ತದೆ ಎಂದರೆ ನಿಜ. ಆದ್ದರಿಂದ ವಾದಿಯೇ ಬಂದು ಸಾಕ್ಷ್ಯ ನುಡಿಯಲು ಏನು ತೊಂದರೆ ಇರುವುದಿಲ್ಲ.

ನಮ್ಮ ಮನೆತನದ ಮೂಲ ಪುರುಷ ಯಾರು ಎಂದರೆ ಸಾಕ್ಷಿಯು ನನ್ನ ತಂದಗೆ ಗೊತ್ತಿರುತ್ತದೆ ಎಂದು ಹೇಳುತ್ತಾರೆ. ನಮ್ಮ ಮನೆತನಕ್ಕೆ ಒಟ್ಟು ಎಷ್ಟು ಆಸ್ತಿಗಳು ಇರುತ್ತವೆ ಎಂದರೆ ಸಾಕ್ಷಿಯು ದಾವಾ ಆಸ್ತಿಯನ್ನು ಹೊರತು ಪಡಿಸಿ ಬೇರೆ ಆಸ್ತಿಗಳು ಸಹ ಇರುತ್ತವೆ ಎಂದು ಹೇಳುತ್ತಾರೆ. ಈ ದಾವೆಯಲ್ಲಿ ದಾವಾ ಆಸ್ತಿಯನ್ನು ಹೊರತು ಪಡಿಸಿ ಬೇರೆ ಆಸ್ತಿಗಳನ್ನು ಯಾವ ಕಾರಣಕ್ಕೆ ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ಕೆಲವು ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ.

ಆಸ್ತಿ ನಂ. 5/1ಬಿ ಇದು ಒಂದೆ ದಾವಾ ಆಸ್ತಿ ಇರುತ್ತದೆ ಎಂದರೆ ನಿಜ. ಈ ದಾವೆಯ ಉತಾರವಾದ ನಿಪಿ 4 ರಲ್ಲಿರುವ ಎಲ್ಲರನ್ನು ಪಕ್ಷಕಾರರನ್ನಾಗಿ ಮಾಡಿರುತ್ತೀರಿಯೇ ಎಂದರೆ ಸಾಕ್ಷಿಯು ಕೆಲವೊಬ್ಬರು ಮರಣ ಹೊಂದಿದ ಕಾರಣ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದು ಹೇಳುತ್ತಾರೆ.

ನಮ್ಮ ಮನೆತನಕ್ಕೆ ಒಟ್ಟು 3 ಆಸ್ತಿಗಳಿದ್ದು ಅವುಗಳೆಂದರೆ ಸರ್ವೆ ನಂ. 131/1ಎ+1ಬಿ/3 ಕ್ಷೇತ್ರ 3 ಎಕರೆ, ಸರ್ವೆ ನಂ. 131/4ಎ+4ಬಿ+4ಸಿ+4ಡಿ+4ಇ/3 ಕ್ಷೇತ್ರ 36 ಗುಂಟೆ ಹಾಗೂ ದಾವಾ ಆಸ್ತಿಯಾದ ಸರ್ವೆ ನಂ. 5/1ಬಿ ಇರುತ್ತವೆ ಎಂದರೆ ನಿಜ. ಈ ದಾವೆಯಲ್ಲಿ ಈ ಮೇಲೆ ಹೇಳಿದ ಎರಡು ಆಸ್ತಿಗಳನ್ನು ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಎರಡು ಆಸ್ತಿಗಳು ಬೇರೆ ಆಗಿರುತ್ತವೆ ಎಂದು ಹೇಳುತ್ತಾರೆ.

ನಮ್ಮ ದೊಡ್ಡಪ್ಪ ಶಿವರಾಯಪ್ಪ ಇವರು ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನ ಮೇಲೆ ವಾಟ್ನಿ ದಾವೆಯನ್ನು ಬೈಲಹೊಂಗಲ ನ್ಯಾಯಾಲಯದಲ್ಲಿ ಹೂಡಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆಯ ಸಹಿಯನ್ನು ನಾನು ಗುರುತಿಸುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದರಲ್ಲಿರುವ ಪ್ರತಿವಾದಿ ನಂ. 1 ರಂತೆ ಇರುವ ತಮ್ಮ ತಂದೆಯ ಸಹಿಯನ್ನು ನೋಡಿ ಗುರತಿಸಿದ್ದರಿಂದ ಸದರಿ ದಾಖಲೆಯನ್ನು ಈಗ **ನಿಡಿ 1** ಎಂದು ಹಾಗೂ ಅದರಲ್ಲಿರುವ ಸಾಕ್ಷಿಯು ಗುರುತಿಸಿದ ಅವರ ತಂದೆಯ ಸಹಿಯನ್ನು **ನಿಡಿ 1 (ಎ)** ಎಂದು ಗುರುತಿಸಲಾಯಿತು. ನಮ್ಮ ದೊಡ್ಡಪ್ಪ ಶಿವರಾಯಪ್ಪ ಇವರು ಬೈಲಹೊಂಗಲ ನ್ಯಾಯಾಲಯದಲ್ಲಿ ಅಸಲು ದಾವಾ ನಂ. 4/2006 ರಲ್ಲಿ ನಮ್ಮ ತಂದೆ ಹಾಗೂ ನಮ್ಮ ಚಿಕ್ಕಪ್ಪ ರಾಜಿ ಆಗಿರುತ್ತಾರೆ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನಮ್ಮ ದೊಡ್ಡಪ್ಪ ಇರಲಿಲ್ಲ ಎಂದು ಹೇಳುತ್ತಾರೆ. ಅಸಲು ದಾವಾ ನಂ. 4/2006 ರ ರಾಜಿ ಪತ್ರದ ಪ್ರಕಾರ ದಾವಾ ಆಸ್ತಿಯಲ್ಲಿ 1 ಎಕರೆ 10 ಗುಂಟೆ ನಮ್ಮ ತಂದೆಯ ಹೆಸರಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ನಮ್ಮ ತಂದೆಗೆ ಗೊತ್ತಿರಬಹುದು. ದಾವೆಯಲ್ಲಿ ನಮ್ಮ

ತಂದೆಯವರ ಸಾಕ್ಷ್ಯ ಮಾಡಿಸಿದರೆ ನಿಜ ಸಂಗತಿ ಹೊರಗೆ ಬರುತ್ತದೆ ಎಂಬ ಉದ್ದೇಶದಿಂದ ನನಗೆ ಅಧಿಕಾರ ನೀಡಿ ನಾನು ಸಾಕ್ಷ್ಯ ನುಡಿಯುವಂತೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅಸಲು ದಾವಾ ನಂ. 04/2006 ರಲ್ಲಿ ರಾಜಿ ಆಗಿರುವ ಎಲ್ಲ ವಿಷಯಗಳು ನನಗೆ ಗೊತ್ತಿದ್ದರೂ ಸಹ ಗೊತ್ತಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕುರಿತು ನಮ್ಮ ತಂದೆ, ನಮ್ಮ ದೊಡಪ್ಪ ಹಾಗೂ ನಮ್ಮ ಚಿಕ್ಕಪ್ಪನ ನಡುವೆ ಈ ಮೊದಲೇ ವಾಟ್ನಿ ಆಗಿದ್ದು ಈ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ನ್ಯಾಯಾಲಯಕ್ಕೆ ಮೋಸ ಮಾಡಿ ದಾವಾ ಆಸ್ತಿಯ ಕುರಿತು ಈ ಮೊದಲೇ ರಾಜೀ ಆಗಿರುವ ವಿಚಾರವನ್ನು ಮರೆಮಾಚಿ ಹೆಚ್ಚಿನ ಲಾಭ ಪಡೆಯುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ.  ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಾದರೂ ನಮ್ಮ ತಂದೆಯ ಸಾಕ್ಷ ನುಡಿಯಲು ಯಾವುದೇ ತೊಂದರೆ ಇಲ್ಲ ಎಂದರೆ ನಿಜ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ.

**ದಿವಾಣಿ ನ್ಯಾಯಾಧೀಶರು, ಕಿತ್ತೂರ.**